

ಕೆ. ಶಿವಲಿಂಗಪ್ಪ ಹಂದಿಹಾಳು
ಚಿತ್ರಗಳು: ಕೇದಾರ್‌ನಾಥ್ ಬಿ.ಎಂ.

# ಆನಂದದ ಆ ದಿವ್ಯ ಶಿಶು...

'ಮಕ್ಕಳ ಸಂಗದೊಳೆಚ್ಚರಗೊಳ್ಳಲಿ ಆನಂದದ ಆ ದಿವ್ಯಶಿಶು, ಹಾಡಲಿ ಕುಣಿಯಲಿ ಹಾರಲಿ ಏರಲಿ ದಿವಿಜತ್ವಕೆ ಈ ಮನುಜಪಶು' ಎನ್ನುವ ಕುವೆಂಪು ಅವರ ಕಾವ್ಯದ ಸಾಲುಗಳು ತಮಗೇ ಹೇಳಿರುವುದು ಎನ್ನುವಷ್ಟು ತೀವ್ರತೆಯಲ್ಲಿ ಮಕ್ಕಳ ಲೋಕವನ್ನು ಹಚ್ಚಿಕೊಂಡವರು ಹಾಗೂ ಮಕ್ಕಳಿಗಾಗಿ ಬರೆಯುತ್ತಿರುವವರು ಆನಂದ ವಿ. ಪಾಟೀಲ (ಜನವರಿ 1, 1955). ಧಾರವಾಡದಲ್ಲಿ ನೆಲೆಸಿದ್ದರೂ ಪಾಟೀಲರದು ವಿಶ್ವದೆಲ್ಲೆಡೆಯಲ್ಲಿನ ಮಕ್ಕಳ ಸಾಹಿತ್ಯ ಲೋಕವನ್ನು ಗಮನಿಸುವ ಕುತೂಹಲದ ಕಣ್ಣು. ಎಪ್ಪತ್ತರ ಹೊಸ್ತಿಲಲ್ಲಿರುವ 'ಮಕ್ಕಳ ಪಾಟೀಲ'ರೊಂದಿಗಿನ ಈ ಮಾತುಕತೆ ಮಕ್ಕಳ ಸಾಹಿತ್ಯ ಲೋಕದ ಬಗ್ಗೆ ಎಲ್ಲರ ಗಮನಸೆಳೆಯುವಂತಿದೆ.

◆ **ಮಕ್ಕಳ ಸಾಹಿತ್ಯವನ್ನು ನಿಮ್ಮ ಅಭಿವ್ಯಕ್ತಿಯ ಪ್ರಧಾನ ಮಾರ್ಗವನ್ನಾಗಿಸಿಕೊಂಡಿರುವಿರಿ. ಸಾಹಿತ್ಯದ ವೇದಿಕೆಗಳಲ್ಲಿ ಯಾವತ್ತೂ ಮಹತ್ವದ್ದಾಗಿ ಗಣನೆಗೆ ಬಾರದ, ಹಿನ್ನೆಲೆಯಲ್ಲಿಯೇ ಉಳಿದುಬಿಡುವ ಈ ಪ್ರಕಾರದಲ್ಲಿ ಇಷ್ಟೊಂದು ತೀವ್ರವಾಗಿ ಹೇಗೆ ತೊಡಗಿಕೊಂಡಿರಿ? ಮಕ್ಕಳ ಸಾಹಿತ್ಯದೊಂದಿಗಿನ ನಿಮ್ಮ ನಂಟು ಶುರುವಾದುದು ಯಾವಾಗ ಮತ್ತು ಹೇಗೆ?**

ಇದು ನನ್ನನ್ನೂ ಬಹುವಾಗಿ ಕಾಡಿದ ಪ್ರಶ್ನೆ. ಅದ್ಯಾವುದೋ ಒಳಗಿನ ತುಡಿತದಿಂದಲೇ ನಾನು ತೊಡಗಿಕೊಂಡುದು. ಪ್ರಾರಂಭದ ದಿನಗಳಲ್ಲಿಯೇ ಪತ್ರಿಕೆಯಂಥ ಕೆಲಸ ಹಚ್ಚಿಕೊಂಡದ್ದರಿಂದ ವಿಸ್ತೃತವಾದ ಓದು, ಕನ್ನಡದಲ್ಲಿ, ಅದರಾಚೆ ಏನೇನೆಲ್ಲ ನಡೆಯುತ್ತಿದೆ ಎನ್ನುವುದನ್ನು ತಿಳಿಯುವುದು ಆ ನಿಟ್ಟಿನಿಂದ ಅಗತ್ಯವಾಗಿಬಿಟ್ಟಿತು. ಜನಪದ ವಿಷಯದಲ್ಲಿ ಎಂ.ಎ., ಪಿಎಚ್.ಡಿ., ಮಾಡಿ ಸಂಶೋಧನೆಯ ಆಸಕ್ತಿ ಬಹುವಾಗಿ ಹೊಂದಿದ್ದ ನನಗೆ ನೌಕರಿಯೇ ಸಿಗದೆ ದಾರಿ ತಪ್ಪಿದಂತಾಗಿತ್ತು. ಅದು ಬಹುಶಃ ಈ ಮಕ್ಕಳ ಸಾಹಿತ್ಯದ ಕೆಲಸದಲ್ಲಿ